ಶ್ರೀ ಭೀಮಪ್ಪನಾಯಕ್.—ಹಿಂದಿನ ಲಿಸ್ಟ್‌ನಲ್ಲಿದ್ದ ವರ ಹೆಸರುಗಳನ್ನೆಲ್ಲಾ ಈಗ ಹೊಸದಾಗಿ ತಯಾರಿಸಿರುವ ಲಿಸ್ಟ್‌ನಲ್ಲಿ ಸೇರಿಸಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ಈ ಲಿಸ್ಟ್‌ನಲ್ಲಿ ಬಂದಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಏಕೆ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನ್‌ನವರ ಅಭಿಪ್ರಾಯದಲ್ಲಿ ಅವರಿಗೆ ಸಾಕಾದಷ್ಟು ಅರ್ಹತೆ ಇಲ್ಲವೆಂದು ಕಂಡುಬಂದಿದೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದೆ ಇವ್ವಹಾಗೆ ಪೋಲೀಸ್, ಎಕ್ಸೈಜ್, ರಿಜಿಸ್ಟ್ರೇಷನ್, ರೆವೆನ್ಯೂ ಮತ್ತು ಇತರ ಇಲಾಖೆಗಳಿಂದ ಆರಿಸಿ ಈ ಲಿಸ್ಟ್ ತಯಾರಿಸಲಾಗಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಿಂಥ ಇಲಾಖೆಗಳಿಂದ ಎಂಬುದನ್ನು ನಿರ್ದಿಷ್ಟವಾಗಿ ಹೇಳಲಾರೆ.

ಶ್ರೀ ಎ. ಭೀಮಪ್ಪನಾಯಕ್.—ಕೆಲವರನ್ನು ಪೋಲೀಸ್ ಡಿಪಾರ್ಟ್‌ಮೆಂಟಿನಿಂದ ತೆಗೆದುಕೊಂಡಿರುವುದು, ಇನ್ನು ಕೆಲವರನ್ನು ಶಿಫಾರಸಿನಮೇಲೆ ತೆಗೆದುಕೊಂಡಿರುವುದು, ಇನ್ನು ಕೆಲವರ ವಿಚಾರದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೋದಮೇಲೆ ಬದಲಾವಣೆಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಈ ವಿಚಾರವನ್ನು ಈಗ ನನ್ನ ಗಮನಕ್ಕೆ ತಂದಿರುತ್ತಾರೆ. ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ಹಿಂದಿನ ಲಿಸ್ಟ್‌ನಲ್ಲಿ ಅನೇಕರು ಅರ್ಹತೆ ಪಡೆದಿದ್ದರೂ ಅವರ ಹೆಸರನ್ನು ಸೇರಿಸದೇ ಇರುವ ಬಗ್ಗೆ ಸರ್ಕಾರಕ್ಕೆ representation ಬಂದಾಗ ಅವರ ಹೆಸರನ್ನು ಹೊಸ ಲಿಸ್ಟ್ ತಯಾರುಮಾಡುವಾಗ ಪರಿಶೀಲನೆಗೆ ತೆಗೆದುಕೊಳ್ಳುವುದಾಗಿ ಭರವಸೆ ಕೊಟ್ಟಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನೆನಪಿಲ್ಲ.

ಶ್ರೀ ಎ. ಭೀಮಪ್ಪನಾಯಕ್.—ಈಗ ಅವರ ವಿಚಾರದ ಬಗ್ಗೆ ಸರ್ಕಾರದವರೇನಾದರೂ ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಇಡೀ ಪ್ರಶ್ನೆ ಈಗ ಸರ್ಕಾರದ ಮುಂದೆ ಪರಿಶೀಲನೆಗೆ ಬಂದಿದೆ. ಅದನ್ನು ಪರಿಶೀಲಿಸಿ ತೀರ್ಮಾನ ಕೈಕೊಳ್ಳುತ್ತಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕೆಲವು ಹೆಸರುಗಳನ್ನು ಬಿಟ್ಟಿರುವ ಬಗ್ಗೆ ಪಬ್ಲಿಕ್ ಸರ್ವಿಸ್ ಕಮಿಷನ್ ಅವರ ಅಭಿಪ್ರಾಯದಲ್ಲಿ ತಕ್ಕ ಅರ್ಹತೆ ಪಡೆದಿಲ್ಲವೆಂದು ತಿಳಿಸಿದಿರಿ. ಅಂದರೆ ಆ ಬಗ್ಗೆ ಅವರು ಸಾಕ್ಷಿ ಸಾಹಿತ್ಯಗಳನ್ನಿಟ್ಟುಕೊಂಡು ಹೇಳಿರುತ್ತಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಹೇಳುವುದಕ್ಕಾಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಯಸ್ಸಿನ ಆಧಾರದಮೇಲೇನಾದರೂ ಅವರು ಅರ್ಹತೆ ಪಡೆದಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲ.

12-30 P.M.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಈ 75 ಜನರದ್ದು ಇದೇ ಕಡೆಯ ಲಿಸ್ಟೋ ಅಥವಾ ಪುನಃ ಏರ್ಪಾಡು ಮಾಡಿ ಅರ್ಹತೆ ಇರತಕ್ಕವರನ್ನು ಕೈಬಿಟ್ಟಿದ್ದರೆ ಅಂತಹವರನ್ನು ಸೇರಿಸುವುದಕ್ಕೆ ಪುನರಾಲೋಚನೆ ಮಾಡುತ್ತೀರೋ?

ಶ್ರೀ ಕಡಿದಾಳ್ ಮಂಜಪ್ಪ.—ಆ ಇಡೀ ಪ್ರಶ್ನೆ ಸರ್ಕಾರದ ಮುಂದೆ ಇದೆ ಎಂದು ಆಗಲೇ ಅರಿಕೆ ಮಾಡಿಕೊಂಡೆ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಪಟ್ಟಿಯಲ್ಲಿ ವಿಶ್ವಕರ್ಮ ಮತ್ತು ಮೈತ್ರ ಜನಾಂಗದವರಿಗೆ ಸಾಕಾದಷ್ಟು ಪ್ರಾತಿನಿಧ್ಯವಿಲ್ಲ ಎಂದು ಕೇಳುತ್ತೇನೆ; ಅದು ನಿಜವೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ಹೊರಪಡಿಸುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯ.—ಪ್ರಾತಿನಿಧ್ಯ ಇಲ್ಲದೇ ಇರತಕ್ಕಂತಹವರಿಗೆ ಹೆಚ್ಚು ಅವಕಾಶ ಕೊಡುತ್ತೀರಾ, ಸ್ವಾಮಿ? ಪ್ರಾತಿನಿಧ್ಯ ಇಲ್ಲದೇ ಇರತಕ್ಕವರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುತ್ತೇವೆ ಎಂದು ಹಿಂದೆ ಅಪ್ಪಣೆ ಆಗಿತ್ತು.

ಉಪಾಧ್ಯಕ್ಷರು.—ಈಗಲೂ ಅಪ್ಪಣೆ ಕೊಟ್ಟಿರಲ್ಲ!

ಶ್ರೀ ಟಿ. ಹನುಮಯ್ಯ.—ಹೆಚ್ಚು ಪ್ರಾತಿನಿಧ್ಯ ಇರುವವರಿಗೆ ಅವಕಾಶ ಕೊಡುವುದನ್ನು ನಿಲ್ಲಿಸಿ ಕಡಮೆ ಬಿದ್ದವರು ಅವರ ಸಮಾನಕ್ಕೆ ಬರುವವರೆಗೂ ಹೆಚ್ಚು ಪ್ರಾತಿನಿಧ್ಯ ಕೊಡುವ ಏರ್ಪಾಡು ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಏನೇನು ನಿಯಮಗಳಿವೆಯೋ ಆ ನಿಯಮಾವಳಿಗಳ ಪ್ರಕಾರ ನಡೆದುಕೊಳ್ಳುತ್ತೇವೆ.

ಶ್ರೀ ಟಿ. ಹನುಮಯ್ಯ.—ಸಾಕಾದಷ್ಟು ಪ್ರಾತಿನಿಧ್ಯವಿಲ್ಲದೇ ಇರತಕ್ಕವರು ಇತರರಿಗೆ ಸರಿಸಮಾನರಾಗುವವರೆಗೂ ಜಾಸ್ತಿ ಪ್ರಾತಿನಿಧ್ಯ ಇರುವವರಿಗೆ ಅವಕಾಶ ಕೊಡುವುದನ್ನು ಸ್ವಲ್ಪಕಾಲದವರೆಗೂ ನಿಲ್ಲಿಸುತ್ತೀರಾ ಎಂದು?

ಶ್ರೀ ಕಡಿದಾಳ್ ಮಂಜಪ್ಪ.—ಅದು ದೊಡ್ಡ ಪ್ರಶ್ನೆ. ಅದನ್ನು ಇನ್ನೊಂದು ಸಂದರ್ಭದಲ್ಲಿ ವಿಚಾರ ಮಾಡುತ್ತೇವೆ.

Probationary Assistant Engineers (Reservation for Scheduled Castes).

Q.—127. **Sri B. RACHAIAH** (Yelandur—Scheduled Castes) —

Will the Government be pleased to state :—

(*a*) whether it is not a fact that some four vacancies of Probationary Assistant Engineers were reserved last year for being filled up by candidates belonging to Scheduled Castes ;

(*b*) if so, whether the vacancies were advertised and applications called for and when ;

(*c*) when they are going to take further steps to make the appointments ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes, on 2nd February 1954.

(SRI KADIDAL MANJAPPA.)

(*c*) As soon as proposals are received from the Public Service Commission.

Sri B. RACHAIAH.—Are there no Scheduled Caste candidates waiting for appointment after qualifying themselves ?

Sri Kadidal MANJAPPA.—These details are not available in the Government.

Sri B. RACHAIAH.—How long will the Public Service Commission take to send up proposals ?

Sri Kadidal MANJAPPA.—I cannot tell you. But they have told me that they are going to expedite the matter.

Sri B. RACHAIAH.—How many years are they likely to take, Sir ?

Sri Kadidal MANJAPPA.—It is a question of months ; not of years.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಿಂದೆ ಅಸಿಸ್ಟೆಂಟ್ ಇಂಜನಿಯರುಗಳಾಗಿ ಪ್ರೊಬೇಷನರುಗಳನ್ನು ತೆಗೆದು ಕೊಂಡಾಗ ಷೆಡ್ಯೂಲ್ಡ್‌ಕ್ಯಾಸ್ಟ್‌ನವರಿಗೆ ಕೆಲವು ಜಾಗ ಗಳು ರಿಸರ್ವ್ ಆಗಿದೆ ಎಂದು ಹೇಳಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅದಾದ ಮೇಲೆ ಉಮೇದುವಾರರು ಬಂದರೆ ನೇಮಕ ಮಾಡುತ್ತೇವೆ ಎಂದು ಹೇಳಿರಲಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಪಬ್ಲಿಕ್ ಸರ್ವಿಸ್ ಕಮಿಷನರು ಅಡ್ವರ್‌ಟೈಸ್ ಮಾಡಿ, ಇಂಟರ್‌ವ್ಯೂ ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಇಂಟರ್‌ವ್ಯೂ ನ್ಯಾಡುವುದು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮಾತ್ರವೋ, ಬೇರೆ ಯವರಿಗೂ ಮಾಡುತ್ತಾರೆಯೋ ?

ಶ್ರೀ ಕಡಿದಾಳ್ ಮಂಜಪ್ಪ.—ಷೆಡ್ಯೂಲ್ಡ್ ಕ್ಯಾಸ್ಟ್ ನವರಿಗೆ ಮಾತ್ರ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬರೀ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಮಾತ್ರವೇ ಆದ ಪಕ್ಷದಲ್ಲಿ ಅದು ಅಡ್ವರ್‌ಟೈಸ್ ಆಗುವುದಕ್ಕೆ ಇಷ್ಟು ದಿವಸ ಬೇಕೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರೀಕ್ಷೆಯಲ್ಲಿ ಉತ್ತೀರ್ಣರಾಗುವವರಿಗೆ ಅವರು ಕಾಯುತ್ತಾ ಇದ್ದರು. ಆಮೇಲೆ ಅಡ್ವರ್‌ಟೈಸ್ ಮಾಡಿದ್ದಾರೆ. ಅರ್ಜಿಗಳು ಬಂದಿವೆ. ಇಂಟರ್‌ವ್ಯೂ ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಫೆಬ್ರವರಿಯಲ್ಲಿ ಒಟ್ಟು ಎಷ್ಟು ಅರ್ಜಿಗಳು ಷೆಡ್ಯೂಲ್ಡ್‌ಕ್ಯಾಸ್ಟ್‌ನವರಿಂದ ಬಂತು ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿವರ ಅವರು ಕಳುಹಿಸಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಹಾಗಾದರೆ ಮುಂದೆ ಇನ್ನು ಸಪ್ತೆಂಬರಿಕ್ಕೆ ಎಗ್ಸಾಮಿನೇಷನ್ ರಿಸರ್ವ್ ಬರುವವರೆಗೂ ಕಾಯುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಜಾಗ್ರತೆ ಇಂಟರ್‌ವ್ಯೂ ಮಾಡುತ್ತಾರೆ ಎಂದು ಗೊತ್ತಾಗಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ರೀತಿ ತಡ ಮಾಡುವುದರಿಂದ ಅವರ ಸೀನಿಯಾರಿಟಿಗೆ ಅಡ್ಡಿಬರುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತಡವಾಗುತ್ತದೆ ಎಂದು ಅವರು ವರದಿಮಾಡಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಒಂದು ವೇಳೆ ನಿಧಾನ ಮಾಡಿದ ಪಕ್ಷದಲ್ಲಿ ಅವರ ಸೀನಿಯಾರಿಟಿ ಓವರ್‌ಲುಕ್ ಆಗುತ್ತದೆ ಎಂಬುದು ಸರ್ಕಾರದವರಿಗೆ ಗೊತ್ತಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಆಗುವುದಿಲ್ಲ.

Tank Restoration (Gollahalli Tank)

Q.—136. **Sri D. M. GOVINDARAJU** (Nelamangala).—

Will the Government be pleased to state :—

(*a*) when Gollahally tank, kasaba hobli, Nelamangala taluk was breached;

(*b*) whether there is any representation from the people of the locality for the restoration of this tank ;

(*c*) whether any estimate has been prepared for restoration of this tank ; if so, when ?

A.—**Sri Kadidal MANJAPPA** (Minister for Revenue and Public Works).—

(*a*) The date is not readily ascertainable.

(*b*) Yes.

(*c*) Yes, during October 1953.

ಶ್ರೀ ಡಿ. ಎಂ. ಗೋವಿಂದರಾಜು.—ಈ ಗೊಲ್ಲಹಳ್ಳಿ ಕೆರೆ ಒಡೆದು ಹೋಗಿ ಎಷ್ಟು ವರ್ಷವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗ ಒಡೆದು ಹೋಯಿತು ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಗೋವಿಂದರಾಜು.—ಸುಮಾರು 10-15 ವರ್ಷಗಳಾದವು ಎಂದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೂ ಜಾಸ್ತಿ ಆಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಇಷ್ಟು ವರ್ಷ ವಾದರೂ ಕೂಡ ಈ ಕೆರೆ ಕಟ್ಟದೆ ನಿಧಾನಮಾಡಿರುವುದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಕಡಿದಾಳ್ ಮಂಜಪ್ಪ.—ಈ ಕೆರೆ ದುರಸ್ತು ಮಾಡುವುದು ಲಾಭದಾಯಕವಾಗಿಲ್ಲ. ಅಚ್ಚುಕಟ್ಟು ಇರುವುದು 38 ಎಕರೆ ; ಹೆಚ್ಚು ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಇಂಥ ಅನೇಕ ಕಾರಣಗಳಿಂದ ನಿಧಾನವಾಗಿದೆ.

ಶ್ರೀ ಡಿ. ಎಂ. ಗೋವಿಂದರಾಜು.—ಕಾಂಟ್ರಿಬ್ಯೂಷನ್ ಹೆಚ್ಚು ಕೊಡುವುದಕ್ಕೆ ಒಪ್ಪುತ್ತಾರೆ. 1953ನೇ ಇಸವಿ ಅಕ್ಟೋಬರ್‌ನಲ್ಲಿ ಅಂದಾಜು ತಯಾರಾಗಿದ್ದರೂ ಇನ್ನೂ ಸರ್ಕಾರದ ಮಂಜೂರಾತಿ ಆಗಿಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಂಜೂರಾಗಿಲ್ಲ. ಕಾರಣ ಇದು ಲಾಭದಾಯಕವಾಗಿಲ್ಲ ಎಂದು ಚೀಫ್ ಇಂಜನಿಯರು ವರದಿ ಮಾಡಿದ್ದಾರೆ.